ತಹಶೀಲ್ದಾರ್‌ರವರು ಅಸಿಸ್ಟೆಂಟ್ ಕಮೀಷನರ್ ಮತ್ತು ಜಿಲ್ಲಾಧಿಕಾರಿಗಳವರಿಗೆ 10-12 ವರ್ಷಗಳಿಂದ ಅರ್ಜಿ ಕೊಟ್ಟರೂ ಅಧಿಕಾರಿಗಳು ಯಾವುದೇ ಕ್ರಮವನ್ನು ಅವರು ತೆಗೆದುಕೊಂಡಿಲ್ಲ. ಜನರಿಗೆ ಆಗಿರುವಂತಹ ಈ ಕಿರುಕುಳವನ್ನು ತಪ್ಪಿಸಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

(iv) Re:-Demand to increase the member of village Accountants in Byadagi Taluk.

ಡಾ. ಹೆಗ್ಗಪ್ಪ ಲಮಾಣಿ.—ಮಾನ್ಯ ಅಧ್ಯಕ್ಷರೆ, ಬ್ಯಾಡಗಿ ತಾಲ್ಲೂಕಿನಲ್ಲಿ ವಿಲೇಜ್ ಅಕೌಂಟೆಂಟ್‌ಗಳು ಬಹಳ ಕಡಿಮೆ ಜನ ಇದ್ದಾರೆ. ವಿಲೇಜ್ ಅಕೌಂಟೆಂಟ್‌ಗಳು ಕಡಿಮೆ ಇರುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ರೈತರಿಗೆ ಉತಾರ್ ಸಿಗುವುದಿಲ್ಲ. ವಿಲೇಜ್ ಅಕೌಂಟೆಂಟ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಡಿಮಾಂಡ್ ಮಾಡುತ್ತಿದ್ದೇವೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ರೈತರ ಬಗ್ಗೆ ಗಮನ ಹರಿಸಬೇಕು. ನಮ್ಮ ತಾಲ್ಲೂಕಿನಲ್ಲಿ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಸಂಬಂಧಪಟ್ಟ ಮಂತ್ರಿಗಳು ಈಗ ಸಭೆಯಲ್ಲಿ ಇಲ್ಲ. ಸರ್ಕಾರ ಇದರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ.ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಅವರಿಗೆ ಹೇಳುತ್ತೇನೆ.

(v) Re:–Non functioning of Vyavsaya Seva Sahakar Sangha Gowdagere,

ಶ್ರೀ ಪಿ. ಮೂಡ್ಲೇಗೌಡ.—ಮಾನ್ಯ ಅಧ್ಯಕ್ಷರೆ, ಶಿರಾ ತಾಲ್ಲೂಕು ಗೌಡಗೆರೆ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ, ಇದು ಸುಮಾರು ವರ್ಷಗಳಿಂದ ಕಾರ್ಯಕಾರಿ ಸಮಿತಿಯಲ್ಲದೆ ಲೆಕ್ಕಪತ್ರಗಳ ದಾಖಲಾತಿಗಳಿಲ್ಲದೆ ಸಂಘದ ಸದಸ್ಯರಿಂದ ಸಾಲ ವಸೂಲಿ ಮಾಡುವವರೇ ಇಲ್ಲದೆ ಸರ್ಕಾರದಿಂದ ದೊರೆಯತಕ್ಕ ರಿಯಾಯಿಗಳು, ಸೌಲಭ್ಯಗಳು ದೊರೆಯದೆ ರೈತ ಸದಸ್ಯರಿಗೆ ಅನ್ಯಾಯವಾಗುತ್ತಿದೆ, ಬಡ್ಡಿ ಮನ್ನಾ ಮಾಡಿರುವುದು ನೀರಿಲ್ಲದೆ ಇರತಕ್ಕ ನಿರುಪಯುಕ್ತ ಜಮೀನುಗಳ ಮೇಲೆ ಇರತಕ್ಕ ಸಾಲ ವಗೈರೆ ಮನ್ನಾ ಮಾಡುವುದು ಈ ರೀತಿಯಾದ ಸರ್ಕಾರದಿಂದ ಒದಗತಕ್ಕ ಸಾಲ ಮತ್ತು ಬಡ್ಡಿ ರಿಯಾಯಿತಿಗಳನ್ನು ರೈತರಿಗೆ ದೊರಕಿಸಿಕೊಡಲು ತಾವು ಜರೂರು ಕ್ರಮ ತೆಗೆದುಕೊಳ್ಳುತ್ತೀರಾ ? 1983–84ರಲ್ಲಿ ಕೊಟ್ಟ ರಿಯಾಯ್ತಿಗಳು ಸಹ ರೈತರಿಗೆ ದೊರಕಿರುವುದಿಲ್ಲ. ಈ ವಿಚಾರದಲ್ಲಿ ರೈತರಿಗೆ ಸೌಲಭ್ಯಗಳು ದೊರಕುವಂತೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಇಲ್ಲಿ 1979–80ರಲ್ಲಿ ಪುಸ್ತಕಗಳು ಕಳುವಾಗಿವೆ. ಪೋಲೀಸರಿಗೆ ಇದರ ಬಗ್ಗೆ ದೂರು ಕೊಡಲಾಗಿತ್ತು. ಅವರು ಇದರ ಬಗ್ಗೆ ವಿಮರ್ಶೆ ಮಾಡಿ 'ಬಿ' ರಿಪೋರ್ಟನ್ನು ಕೊಟ್ಟಿದ್ದರು. ರೂಲ್–54ರ ಪ್ರಕಾರ ಪುಸ್ತಕಗಳನ್ನು ಪುನಃ ಬರೆಯಿರಿ ಎಂದು ದಿನಾಂಕ 6-1-82ರಲ್ಲಿ ಆದೇಶ ಕೊಡಲಾಗಿತ್ತು. ಇದಕ್ಕೆ ಬೇರೆ ಕಾರ್ಯದರ್ಶಿಯವರನ್ನೂ ನೇಮಕ ಮಾಡಲಾಗಿತ್ತು. ಆದರೆ ಅವರು ಕಾಯಿಲೆಯಿಂದಿದ್ದ ಕಾರಣ ಡ್ಯೂಟಿಗೆ ಹಾಜರಾಗಲಿಲ್ಲ. ಅದಾದಮೇಲೆ ಜಿಲ್ಲಾ ಬ್ಯಾಂಕಿನ ಸೂಪರ್‌ವೈಸರ್ ಅವರನ್ನು ಕಾರ್ಯದರ್ಶಿಯಾಗಿ ನೇಮಿಸಿದ್ದೇವೆ. ಮತ್ತು ಜನರಿಗೆ ಹಾಗೂ ಎಲ್ಲಾ ಬ್ರಾಂಚ್‌ಗೆ ಹಣ ಕೊಡಿ ಎಂದು ತಿಳಿಸಿದ್ದೇವೆ. ಗುರುಲಿಂಗಯ್ಯ, ಹಿಂದಿನ ಕಾರ್ಯದರ್ಶಿಯವರು ರಸೀತಿಗಳನ್ನು ಕೊಟ್ಟರೂ ವೆರಿಫೈ ಮಾಡಲಿಕ್ಕೆ ಪುಸ್ತಕಗಳಿಲ್ಲ. ಜಿಲ್ಲಾ ಬ್ಯಾಂಕು ಮತ್ತು ನಮ್ಮ ಅಧಿಕಾರಿಗಳು ಇಬ್ಬರೂ ಸೇರಿ ಈ ಸೊಸೈಟಿಯಲ್ಲಿ 239ಜನರಿಗೆ ಸುಮಾರು ಮೂರು ಲಕ್ಷ ರೂಪಾಯಿಗಳಷ್ಟು ಸಾಲ ಕೊಟ್ಟಿದ್ದಾರೆ. ಜಿಲ್ಲಾ ಬ್ಯಾಂಕಿನವರಿಗೆ ಇದನ್ನು ಬಿಡಿ ಎಂದು ಸೂಚನೆಗಳನ್ನು ಕೊಟ್ಟಿದ್ದೇವೆ. ಮಾನ್ಯ ಮೂಡ್ಲೇಗೌಡರು ಆರು ತಿಂಗಳ ಹಿಂದೆ ಇದನ್ನು ಹೇಳಿದ್ದರೆ ನಾವು ವ್ಯವಸ್ಥೆ ಮಾಡಬಹುದಾಗಿತ್ತು. ಆದರೂ ಕೂಡ ನಾನು ನಿನ್ನೆಯ ರಾತ್ರಿ ಡೆಪ್ಯೂಟಿ ರಿಜಿಸ್ಟ್ರಾರ್ ಜೊತೆ ಮಾತನಾಡಿ, ಅವರೇ ಖುದ್ದಾಗಿ ಹೋಗಿ ನೋಡಲು ಸೂಚನೆ ಕೊಟ್ಟಿದ್ದೇನೆ.